# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 399 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16.02.2023 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಾರಕ್ಕಿ ಅಗ್ರಹಾರದ ಸರ್ವೆ ನಂ.21/6, 21/7 ಮತ್ತು 21/8 ರಲ್ಲಿ ಬಡಾವಣೆಯನ್ನು ನಿರ್ಮಾಣ ಮಾಡಿದ್ದು ಯಾವಾಗ; | ಜೆ.ಪಿ ನಗರ ಬಡಾವಣೆ (2ನೇ ಹಂತ), ರಚಿಸುವ ಸಂಬಂಧ ಅಧಿಸೂಚನೆ ಸಂಖ್ಯೆ: HMA/19/MNJ/1970, ದಿನಾಂಕ:27/05/1970 ರಂತೆ ಅಂತಿಮ ಅಧಿಸೂಚನೆಯಾಗಿದ್ದು, ಅನಧಿಕೃತ ಒತ್ತುವರಿದಾರರಿಂದ ನಿರ್ಮಿಸಲಾಗಿದ್ದ 4 ಆರ್.ಸಿ.ಸಿ. ಕಟ್ಟಡಗಳು ಹಾಗೂ 9 ಶೀಟ್ ಕಟ್ಟಡಗಳನ್ನು ತೆರವುಗೊಳಿಸಲಾದ ನಂತರ 2009 ರಲ್ಲಿ ಬಡಾವಣೆಯನ್ನು ರಚಿಸಲು ಕ್ರಮ ವಹಿಸಲಾಗಿರುತ್ತದೆ. |
| ಆ | ಈ ಬಡಾವಣೆಯಲ್ಲಿ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ: ನಿವೇಶನ ಹಂಚಿಕೆ ಮಾಡಿದ ನಂತರ ಹಂಚಿಕೆದಾರರಿಗೆ ಖಾತೆ ಮಾಡಲು ಬಿ.ಬಿ.ಎಂ.ಪಿ. ಗೆ ಅಧಿಕೃತ ನಕ್ಷೆಯೊಂದಿಗೆ ಯಾವಾಗ ಹಸ್ತಾಂತರ ಮಾಡಲಾಯಿತು; | ಸಾರಕ್ಕಿ ಅಗ್ರಹಾರ ಸರ್ವೆ ನಂ. 21/6, 21/7 ಮತ್ತು 21/8 ರಲ್ಲಿ ರಚಿಸಲಾಗಿರುವ ಒಟ್ಟು 37 ನಿವೇಶನಗಳ ಪೈಕಿ ನಿವೇಶನ ಸಂಖ್ಯೆ:24ಅನ್ನು ಹರಾಜಿನ ಮೂಲಕ ಮಾರಾಟ ಮಾಡಿ ದಿನಾಂಕ:11.10.2010 ರಂದು ಶ್ರೀ ಶ್ರೀಕಾಂತ್ ಐತಾಳ್ ಎಂಬುವರಿಗೆ ಶುದ್ಧ ಕ್ರಯಪತ್ರ ನೋಂದಾಯಿಸಲಾಗಿದೆ. ನಿವೇಶನ ಸಂಖ್ಯೆ:36ಅನ್ನು 'ಜಿ' ಪ್ರವರ್ಗದಡಿ ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ ರವರಿಗೆ ಹಂಚಿಕೆ ಮಾಡಿ ದಿನಾಂಕ:17.01.2011 ರಂದು ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರವನ್ನು ನೋಂದಾಯಿಸಲಾಗಿರುತ್ತದೆ. ಉಳಿದ ನಿವೇಶನಗಳನ್ನು ಪ್ರಾಧಿಕಾರದಿಂದ 2010ನೇ ಸಾಲಿನಲ್ಲಿ ಹರಾಜಿನ ಮೂಲಕ ಮಾರಾಟ ಮಾಡಲು ಹೊರಡಿಸಲಾದ ಅಧಿಸೂಚನೆಯಂತೆ ನಿವೇಶನಗಳನ್ನು ಹರಾಜಿನಲ್ಲಿ ವಿಕ್ರಯಿಸಲಾಗಿರುತ್ತದೆ. ಆದರೆ, ಈ ಜಮೀನುಗಳ ಮೇಲೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾದ ಕಾರಣ ಶುದ್ಧಕ್ರಯಪತ್ರ ನೋಂದಾಯಿಸಿರುವುದಿಲ್ಲ. ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:106/2011 ದಿನಾಂಕ:05.04.2011 ರ ನಿರ್ಣಯದಂತೆ ಹರಾಜುದಾರರಿಗೆ ಅವರು ಪಾವತಿಸಿದ್ದ ಮೌಲ್ಯದ ಶೇ.95ರಷ್ಟನ್ನು ಹಿಂದಿರುಗಿಸಲಾಗಿರುತ್ತದೆ.<br><br>ಈ ನಿವೇಶನಗಳನ್ನು ಇದುವರೆವಿಗೂ ಬಿಬಿಎಂಪಿಗೆ ಅಧಿಕೃತವಾಗಿ ಹಸ್ತಾಂತರಿಸಿರುವುದಿಲ್ಲ. ಆದರೆ, ನೋಂದಾಯಿಸಲಾಗಿರುವ ಎರಡು ನಿವೇಶನಗಳ ಪ್ರಕರಣಗಳ ಪೈಕಿ ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ ರವರ ನಿವೇಶನ ಸಂಖ್ಯೆ:36ಕ್ಕೆ ಸಂಬಂಧಿಸಿದಂತೆ ನೋಂದಾಯಿಸಿರುವ ದಾಖಲಾತಿಗಳ ನೈಜತೆಯ ಬಗ್ಗೆ ಬಿಬಿಎಂಪಿಯ ಜೆ.ಪಿ.ನಗರ ಉಪವಿಭಾಗದ ಸಹಾಯಕ ಕಂದಾಯ ಅಧಿಕಾರಿಯು ಕೋರಿದ್ದ ಮಾಹಿತಿಗೆ ಪ್ರಾಧಿಕಾರದಿಂದ ನೋಂದಾಯಿಸಲಾಗಿರುವ ದಾಖಲಾತಿಗಳು ನೈಜವಾಗಿರುತ್ತವೆ ಎಂದು ವರದಿ ನೀಡಲಾಗಿರುತ್ತದೆ. |
| ಇ | ಬಿ.ಬಿ.ಎಂ.ಪಿ. ಗೆ ಹಸ್ತಾಂತರ ಮಾಡಿದ ನಂತರ ಆಗಿರುವ ಪ್ರಗತಿ ಏನು? (ಸಂಪೂರ್ಣ ಮಾಹಿತಿ ನೀಡುವುದು) | ಈ ನಿವೇಶನಗಳನ್ನು ಇದುವರೆವಿಗೂ ಬಿಬಿಎಂಪಿಗೆ ಅಧಿಕೃತವಾಗಿ ಹಸ್ತಾಂತರ ಮಾಡಿರುವುದಿಲ್ಲವಾದ ಕಾರಣ ಆಗಿರುವ ಪ್ರಗತಿ ಉದ್ಭವಿಸುವುದಿಲ್ಲ. |

**ಸಂಖ್ಯೆ: ನಅಇ 47 ಬೆಂಭೂಸ್ವಾ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ